ಧೈರ್ಯ–ಸ್ಥೈರ್ಯ

ಒಂದು ರಾತ್ರಿಯ ಸಂಭವವಿದು. ಮದೀನ ವಾಸಿಗಳಿಗೆ ಭಯಾನಕ ಶಬ್ದವು ಕೇಳಿಸತೊಡಗಿತು. ಜನರೆಲ್ಲ ಭಯವಿಹ್ವಲರಾದರು. ಅದು ಏನೆಂದು ತಿಳಿಯಲು ಜನರು ಶಬ್ದ ಬಂದ ಕಡೆಗೆ ಧಾವಿಸಿದರು. ಆಗ ಅಲ್ಲಾಹನ ಸಂದೇಶವಾಹಕರು(ಸ) ಆ ಶಬ್ದ ಬರುತ್ತಿದ್ದ ಕಡೆಯಿಂದ ಮರಳುತ್ತಿರುವುದನ್ನು ಅವರು ಕಂಡರು. ಅಂದರೆ ಜನರಿಗಿಂತ ಮುಂಚೆಯೇ ಪ್ರವಾದಿವರ್ಯರೇ(ಸ) ಪರಿಸ್ಥಿತಿಯನ್ನು ಅರಿಯಲು ಹೊರಟು ಹೋಗಿದ್ದರು. ನಗರಕ್ಕೆ ಹತ್ತಿರ ಬಂದಾಗ ಪ್ರವಾದಿವರ್ಯರು(ಸ) ಜನರಿಗೆ ಸಾಂತ್ವನ ನೀಡಿದರು, "ಹೆದರುವಂತಹದ್ದೇನಿಲ್ಲ. ಭಯಪಡಬೇಡಿರಿ." (ಮುತ್ತಫಕ್ ಅಲೈಹಿ)

ಖಲೀಫಾ ಉಮರ್‌ರ(ರ) ಆಡಳಿತ ಕಾಲದಲ್ಲಿ, ಒಮ್ಮೆ ಬೈತುಲ್ ಮಾಲ್‌ಗೆ ಹೇರಳ ಬಟ್ಟೆಯನ್ನು ನೀಡಲಾಯಿತು. ಉಮರ್(ರ) ಎಲ್ಲರಿಗೂ ಅದನ್ನು ಸಮಾನವಾಗಿ ಹಂಚಿದರು. ಅದೇ ಬಟ್ಟೆಯ ಜುಬ್ಬವನ್ನು ಧರಿಸಿ ಅವರು ವೇದಿಕೆಯನ್ನೇರಿ ಜನರಿಗೆ ಉಪದೇಶ ನೀಡತೊಡಗಿದರು, "ಜನರೇ! ಆಲಿಸಿರಿ ಮತ್ತು ಅನುಸರಿಸಿರಿ..." ಅಷ್ಟರಲ್ಲಿ ನೆರೆದ ಜನರೆಡೆಯಿಂದ ಓರ್ವ ವ್ಯಕ್ತಿ ಎದ್ದು ನಿಂತು ಹೇಳಿದ, "ನಾವು ಕೇಳಲಾರೆವು ಮತ್ತು ಅನುಸರಿಸಲಾರೆವು." ಉಮರ್(ರ) ಕೇಳಿದರು, "ಯಾಕೆ? ಏನಾಯಿತು?" ಆಗ ಆ ವ್ಯಕ್ತಿ ಹೇಳಿದ, "ಎಲ್ಲರಿಗೂ ಸಮಾನ ಅಳತೆಯ ಬಟ್ಟೆಯನ್ನು ವಿತರಿಸಲಾಗಿತ್ತು. ಅಷ್ಟು ಸಣ್ಣ ಬಟ್ಟೆಯಿಂದ ಇಷ್ಟು ಉದ್ದದ ಜುಬ್ಬ ಹೊಲಿಯಲಿಕ್ಕಾಗದು. ನೀವು ಇದನ್ನು ಎಲ್ಲಿಂದ ಮಾಡಿಸಿದಿರಿ?" ಉಮರ್‌ರವರು(ರ) ತಮ್ಮ ಮಗ ಅಬ್ದುಲ್ಲಾರನ್ನು(ರ) ತೋರಿಸಿ, "ಇವನು ನಿಮ್ಮ ಪ್ರಶ್ನೆಗೆ ಉತ್ತರಿಸುತ್ತಾನೆ" ಎಂದರು. ಅಬ್ದುಲ್ಲಾ(ರ) ಎದ್ದು ಹೇಳಿದರು, "ನನ್ನ ಪಾಲಿನ ಬಟ್ಟೆಯನ್ನು ಅಪ್ಪನಿಗೆ ಕೊಟ್ಟಿದ್ದೆ. ಅವರಿಗೆ ಅದರ ಅಗತ್ಯವಿತ್ತು. ಆದ್ದರಿಂದ ಇಷ್ಟು ನೀಳವಾದ ಜುಬ್ಬ ಹೊಲಿಯಲು ಸಾಧ್ಯವಾಯಿತು." ಉತ್ತರ ಕೇಳಿದ ಆ ವ್ಯಕ್ತಿಯು ಸಮಾಧಾನಗೊಂಡು ಹೇಳಿದ, "ಸರಿ. ಈಗ ನೀವು ಹೇಳಿರಿ. ನಾವು ಆಲಿಸುತ್ತೇವೆ ಮತ್ತು ಅನುಸರಿಸುತ್ತೇವೆ."

ಕಷ್ಟದ ಕಾಲದಲ್ಲಿ ಶೌರ್ಯ ಪ್ರದರ್ಶಿಸುವುದು ಮತ್ತು ನಿರ್ಭೀತರಾಗಿರುವುದೇ ಧೈರ್ಯ–ಸ್ಥೈರ್ಯವಾಗಿದೆ. ಅಲ್ಲಾಹನ ಸಂದೇಶವಾಹಕರ(ಸ) ಜೀವನ ಚರಿತ್ರೆಯಲ್ಲಿ ಈ ವಿಷಯವಾಗಿ ನಮಗೆ ಅತ್ಯುತ್ತಮ ಮಾದರಿ ದೊರೆಯುತ್ತದೆ. ಯುದ್ಧಗಳಲ್ಲಿ ಪರಿಸ್ಥಿತಿಯು ತೀರಾ ಹದಗೆಟ್ಟಾಗ, ಸಹಾಬಿಗಳು ಪ್ರವಾದಿವರ್ಯರ(ಸ) ಮೊರೆ ಹೋಗುತ್ತಿದ್ದರು. "ಘನಘೋರ ಕಾಳಗ ನಡೆಯುವಾಗ ನಾವು ಅಲ್ಲಾಹನ ಸಂದೇಶವಾಹಕರ(ಸ) ಆಶ್ರಯ ಪಡೆಯುತ್ತಿದ್ದೆವು. ಅಲ್ಲಾಹನ ಸಂದೇಶವಾಹಕರು(ಸ) ಶತ್ರುಗಳಿಗೆ ತೀರಾ ನಿಕಟರಾಗುತ್ತಿದ್ದರು" ಎಂದು ಅಲೀ(ರ) ಹೇಳುತ್ತಾರೆ. ಅದೇ ರೀತಿ, "ನಾವು ಯುದ್ಧದ ವೇಳೆ ಅಲ್ಲಾಹನ ಸಂದೇಶವಾಹಕರ(ಸ) ಅಸ್ತಿತ್ವದ ಮೂಲಕ ನಮ್ಮ ರಕ್ಷಣೆಯನ್ನು ಮಾಡುತ್ತಿದ್ದೆವು" ಎಂದು ಬರಾಅ್(ರ) ಹೇಳುತ್ತಾರೆ.

ಹುನೈನ್ ಯುದ್ಧದ ಸಂದರ್ಭದಲ್ಲಿ, ಶತ್ರುಗಳು ವಿಪರೀತ ಬಾಣ ಹೂಡುತ್ತಾ ಮುಸ್ಲಿಮರನ್ನು ಹಿಮ್ಮೆಟ್ಟಲು ನಿರ್ಬಂಧಿಸುತ್ತಾರೆ. ಇದರಿಂದಾಗಿ ಹಲವು ಮಂದಿ ಯುದ್ಧದಿಂದ ಪಲಾಯನ ಮಾಡುತ್ತಿದ್ದರು. ಇಂತಹ ಕಷ್ಟದ ಸಂದರ್ಭದಲ್ಲಿ ಪ್ರವಾದಿವರ್ಯರು(ಸ) ತಮ್ಮ ಸ್ಥಾನದಲ್ಲಿ ಅನುಪಮವಾದ ಧೈರ್ಯ ಸಾಹಸವನ್ನು ಪ್ರದರ್ಶಿಸುತ್ತಾ ಸ್ಥಿರವಾಗಿ ನಿಂತಿದ್ದರು. ಅವರು(ಸ) ತಮ್ಮ ಎಡಬಲಗಳಲ್ಲಿ ಖಡ್ಗ ಝಳಪಿಸುತ್ತಾ ಧ್ವನಿಯೆತ್ತರಿಸಿ ಹೀಗೆ ಹೇಳುತ್ತಿದ್ದರು,

«أَنا النبيُّ لا كذبْ أنا ابنُ عبدِالمطلبْ»

"ನಾನು ನೈಜ ಪ್ರವಾದಿಯಾಗಿದ್ದೇನೆ ಮತ್ತು ನಾನು ಅಬ್ದುಲ್ ಮುತ್ತಲಿಬ್‌ರ ಸಂತಾನವಾಗಿದ್ದೇನೆ."

www.uzairbaki.com

ಪ್ರವಾದಿವರ್ಯರ(ಸ) ಈ ಧ್ವನಿ ಆಲಿಸಿದವರೆಲ್ಲರೂ ಅತ್ಯುತ್ಸಾಹದಿಂದ ಮತ್ತು ಅಪಾರ ಸಾಹಸದಿಂದ ಶತ್ರುಗಳ ಮೇಲೆ ಮುಗಿಬೀಳುತ್ತಿದ್ದರು. ಹೀಗೆ ಅಲ್ಲಾಹನು ಮುಸ್ಲಿಮರಿಗೆ ವಿಜಯ ದಯಪಾಲಿಸಿದನು. ಪ್ರವಾದಿವರ್ಯರು(ಸ) ಸ್ವತಃ ಧೈರ್ಯದ ಪ್ರತಿರೂಪವಾಗಿದ್ದರು, ಶೌರ್ಯದ ಮಾದರಿಯಾಗಿದ್ದರು. ಅವರು ತಮ್ಮ ಸಹಚರರಿಗೆ ಅಂತಹುದೇ ತರಬೇತಿಯನ್ನು ನೀಡಿದ್ದರು. ಬಳಿಕ ಈ ಜನರೇ ದೊಡ್ಡ ದೊಡ್ಡ ಸೇನಾನಾಯಕರಾದರು ಮತ್ತು ತ್ಯಾಗ-ಬಲಿದಾನದ ಮಹೋನ್ನತ ಇತಿಹಾಸವನ್ನು ರಚಿಸಿದರು.

ಪ್ರವಾದಿವರ್ಯರ(ಸ) ಅನುಚರರಲ್ಲಿ ಅಮ್ರ್ ಬಿನ್ ಜಮೂಹ್(ರ) ಎಂಬವರಿದ್ದರು. ಅವರು ಯಾವುದೋ ಒಂದು ಸಂದರ್ಭದಲ್ಲಿ ತಮ್ಮ ಒಂದು ಕಾಲನ್ನು ಕಳಕೊಂಡಿದ್ದರು. ನಡೆದಾಡಲು ಅಶಕ್ತರಾಗಿದ್ದರೆಂದೇ ಹೇಳಬಹುದು. ಇದೇ ಕಾರಣವಾಗಿ ಅವರ ಮಕ್ಕಳು ಅವರೊಡನೆ ಯುದ್ಧಕ್ಕೆ ಹೋಗದೆ ಮನೆಯಲ್ಲೇ ಇರುವಂತೆ ಒತ್ತಾಯಿಸಿದರು. ಆದರೆ ಅವರು ಒಪ್ಪಲಿಲ್ಲ ಮತ್ತು "ನಾನು ಕುಂಟನಾಗಿಯೇ ಸ್ವರ್ಗಕ್ಕೆ ಹೋಗಲು ಬಯಸುತ್ತೇನೆ" ಎಂದರು. ಅವರು ಪ್ರವಾದಿವರ್ಯರೊಡನೆ(ಸ) ಯುದ್ಧಕ್ಕೆ ಹೋಗಲು ಅನುಮತಿ ಕೇಳಿದರು. ಪ್ರವಾದಿವರ್ಯರು(ಸ) ಅನುಮತಿಯನ್ನೂ ನೀಡಿದರು. ಕೊನೆಗೂ ಅವರು ಯುದ್ಧದಲ್ಲಿ ಸಾಹಸ ಮೆರೆಯುತ್ತಾ ಹುತಾತ್ಮರಾದರು.

ಅದೇ ರೀತಿ ಅಲೀಯವರ(ರ) ಧೈರ್ಯ-ಸಾಹಸವು ಅನುಪಮವಾದುದು. ಅವರು ಬಾಲ್ಯದಲ್ಲಿಯೇ ನಿರ್ಭೀತರಾಗಿದ್ದರು. ಪ್ರವಾದಿವರ್ಯರು(ಸ) ಹಿಜ್ರತ್ ಹೊರಟಿದ್ದ ಸಂದರ್ಭದಲ್ಲಿ ಅಲಿಯವರೇ ಪ್ರವಾದಿವರ್ಯರ(ಸ) ಹಾಸಿಗೆಯಲ್ಲಿ ಮಲಗಿದ್ದರು. ವಸ್ತುತಃ ಇದರಿಂದ ಜೀವಕ್ಕೆ ಅಪಾಯವಿದೆ ಎಂಬುದನ್ನು ಅವರು ಚೆನ್ನಾಗಿ ಅರಿತಿದ್ದರು. ಆದರೆ ಅಲ್ಲಾಹನ ಸಂದೇಶವಾಹಕರು(ಸ) ಸುರಕ್ಷಿತವಾಗಿ ಮದೀನ ತಲುಪಲಿ ಎಂದು ಅವರು ಸ್ವಯಂ ತಮ್ಮ ಜೀವವನ್ನು ಪಣಕ್ಕಿಟ್ಟಿದ್ದರು.

ಮೂತಾ ಯುದ್ಧದಲ್ಲಿ ಅಬ್ದುಲ್ಲಾ ಬಿನ್ ರವಾಹ(ರ), ಝೈದ್ ಬಿನ್ ಹಾರಿಸ(ರ) ಮತ್ತು ಜಅ್‌ಫರ್ ಬಿನ್ ಅಬೀತಾಲಿಬ್(ರ) ತೋರಿದ ಸಾಹಸವು ಇತಿಹಾಸದ ಪುಟಗಳಲ್ಲಿ ಉಜ್ವಲ ಅಧ್ಯಾಯಗಳಾಗಿದ್ದುವು. ಖಾಲಿದ್ ಬಿನ್ ವಲೀದ್‌ರ(ರ) ಧೈರ್ಯ ಪರಾಕ್ರಮವು ಅನುಪಮವಾದುದು. ಅವರ ಈ ವಿಶೇಷತೆಯಿಂದಾಗಿಯೇ ಅಲ್ಲಾಹನ ಸಂದೇಶವಾಹಕರು(ಸ) ಅವರಿಗೆ 'ಸೈಫುಲ್ಲಾಹ್' (ಅಲ್ಲಾಹನ ಖಡ್ಗ) ಎಂಬ ಬಿರುದು ನೀಡಿದ್ದರು. ಅವರು ತಮ್ಮ ಅಂತಿಮ ಕ್ಷಣಗಳಲ್ಲಿ ಬಹಳ ದುಃಖಿತರಾಗಿದ್ದರು. "ಅಯ್ಯೋ! ನಾನು ಹಾಸಿಗೆಯಲ್ಲಿ ಮರಣಿಸುತ್ತಿದ್ದೇನೆ" ಎಂದು ಹಲುಬುತ್ತಿದ್ದರು. ವಸ್ತುತಃ ಗಾಯದ ಕಲೆಯಿಲ್ಲದ ಯಾವೊಂದು ಭಾಗವೂ ಅವರ ದೇಹದಲ್ಲಿರಲಿಲ್ಲ. ಆದಾಗಿಯೂ ಅವರ ಅದೃಷ್ಟದಲ್ಲಿ ಹುತಾತ್ಮತೆ ಬರೆದಿರಲಿಲ್ಲ. ಅದಕ್ಕಾಗಿಯೇ ಅವರು ಖೇದ ಪಟ್ಟುಕೊಳ್ಳುತ್ತಿದ್ದರು.

ಧೈರ್ಯ ಮತ್ತು ಸಾಹಸವು ಕೇವಲ ಪುರುಷರಿಗೆ ಸೀಮಿತವಾಗಿರಲಿಲ್ಲ. ಪ್ರವಾದಿವರ್ಯರ(ಸ) ತರಬೇತಿಯ ಪರಿಣಾಮವಾಗಿ ಸ್ತ್ರೀಯರಲ್ಲಿಯೂ ಇಂತಹ ಭಾವನೆಯು ತುಂಬಿಕೊಂಡಿತ್ತು. ಉಮ್ಮು ಅಮ್ಮಾರ(ರ), ಉಮ್ಮು ಅತಿಯ್ಯ(ರ), ಉಮ್ಮು ಸುಲೈಮ್(ರ), ಲೈಲಾ ಗಫ್ಫಾರಿಯಾ(ರ) ಮುಂತಾದ ಅನೇಕ ಸಹಾಬಿ ಸ್ತ್ರೀಯರೂ ಇಸ್ಲಾಮೀ ಸೇನೆಯಲ್ಲಿ ಸ್ಥಾನವನ್ನು ಗಿಟ್ಟಿಸಿದ್ದರು. ಗಾಯಾಳುಗಳ ಶುಶ್ರೂಷೆ, ಯೋಧರಿಗೆ ಆಹಾರ-ಪಾನೀಯದ ವ್ಯವಸ್ಥೆ ಮಾಡುವುದು ಮತ್ತಿತರ ಅಗತ್ಯದ ಸೇವೆಗಳಿಗಾಗಿ ಇವರೆಲ್ಲರ ಹೆಸರುಗಳು ಅಜರಾಮರವಾಗಿವೆ. ಜಗತ್ತಿನಾಂತ್ಯದ ವರೆಗೂ ಅವರು ಸ್ಮರಿಸಲ್ಪಡುತ್ತಿರುವರು.

ಧೈರ್ಯ ಮತ್ತು ನಿರ್ಭೀತಿಯ ಈ ಭಾವನೆಯು ಕೇವಲ ಯುದ್ಧದ ವೇಳೆಯಲ್ಲಿ ಮಾತ್ರ ಇದ್ದುದಲ್ಲ, ಬದಲಾಗಿ ಇಸ್ಲಾಮಿನ ಸ್ಥಾಪನೆ ಮತ್ತು ರಕ್ಷಣೆ ಹಾಗೂ ಅದರ ಬೇಡಿಕೆಗಳ ಈಡೇರಿಕೆಯಲ್ಲೂ ಎಲ್ಲೆಡೆ ಪ್ರಕಟವಾಗುತ್ತಿತ್ತು. ಮಹಾನ್ ಮಹಿಳಾ ಮಣಿ ಖೌಲ ಬಿಂತಿ ಶುಅ್‌ಲಬ(ರ) ಒಮ್ಮೆ ದಾರಿಯಲ್ಲಿ ಅಮೀರುಲ್ ಮೂಮಿನೀನ್ ಉಮರ್‌ರನ್ನು(ರ) ತಡೆದು, ಅವರಿಗೆ ಉಪದೇಶಿಸತೊಡಗುತ್ತಾರೆ. ಉಮರ್(ರ) ಸುಮ್ಮನೆ ನಿಂತು ಅತ್ಯಂತ ವಿನಯದಿಂದ ಅವರ ಉಪದೇಶಗಳನ್ನು ಆಲಿಸುತ್ತಾರೆ. ಎಲ್ಲಿಯ ವರೆಗೆಂದರೆ, ಖೌಲರು(ರ) ಬಹಳ ಹೊತ್ತಿನ ತನಕ ಉಪದೇಶಿಸುತ್ತಿದ್ದರು ಮತ್ತು ಉಮರ್(ರ) ಸ್ತಬ್ಧರಾಗಿ ನಿಂತು ಆಲಿಸುತ್ತಲೇ ಇದ್ದರು.

www.uzairfalahi.com

ಪ್ರವಾದಿವರ್ಯರು(ಸ) ಜನರಲ್ಲಿ ಧೈರ್ಯ-ಶೌರ್ಯದ ಎಂತಹ ಜ್ಯೋತಿಯನ್ನು ಬೆಳಗಿದ್ದರೆಂದರೆ, ಹದಿಹರೆಯದ ಮಕ್ಕಳಲ್ಲೂ ಉತ್ಸಾಹ ಪುಟಿಯುತ್ತಿತ್ತು. ಒಮ್ಮೆ ಪ್ರವಾದಿವರ್ಯರು(ಸ) ತಮ್ಮ ಸಹಾಬಿಗಳೊಡಗೂಡಿ ಯುದ್ಧವೊಂದಕ್ಕೆ ಹೊರಟಿದ್ದರು. ಪ್ರವಾದಿವರ್ಯರು(ಸ) ಸೇನೆಯ ಅವಲೋಕನ ನಡೆಸುವಾಗ, ಉಮೈರ್ ಬಿನ್ ಅಬೀ ವಕ್ಕಾಸ್(ರ) ಎಂಬ ಹದಿಹರೆಯದ ಸಹಾಬಿಯು, ಎಲ್ಲಾದರೂ ತನ್ನ ಕಡಿಮೆ ಪ್ರಾಯದಿಂದಾಗಿ ಪ್ರವಾದಿವರ್ಯರು(ಸ) ಮನೆಗೆ ಮರಳಿಸಬಹುದೆಂಬ ಆತಂಕದಿಂದ ಇತರರ ಹಿಂದೆ ಅಡಗಿಕೊಳ್ಳುತ್ತಾ ಇದ್ದರು. ಕೊನೆಗೂ ಅವರು ಪ್ರವಾದಿವರ್ಯರ(ಸ) ಕಣ್ಣಿಗೆ ಬಿದ್ದರು. ಆದರೆ ಪ್ರವಾದಿವರ್ಯರು(ಸ) ಅವರನ್ನು ಪ್ರೀತಿಯಿಂದ ಸೇನೆಯ ಜತೆಗಿರಲು ಅನುಮತಿಸಿದರು.

ಶೌರ್ಯ ಮೆರೆಯುವಂತಹ ಸಂದರ್ಭಗಳು ಅನೇಕ ಇವೆ. ಅವುಗಳನ್ನು ನಾವು ಸ್ಥೈರ್ಯದ ವಿಧಗಳು ಎಂದೂ ಹೇಳಬಹುದಾಗಿದೆ. ಉದಾಹರಣೆಗೆ:

- ಒಳಿತುಗಳನ್ನು ಆದೇಶಿಸಲು ಮತ್ತು ಕೆಡುಕಿನಿಂದ ತಡೆಯಲು ಸ್ಥೈರ್ಯ ಪ್ರದರ್ಶಿಸಲಾಗುತ್ತದೆ. ಪ್ರವಾದಿವರ್ಯರು(ಸ) ಮಾತುಮಾತಿಗೆ ಕೋಪಗೊಳ್ಳುತ್ತಿರಲಿಲ್ಲ. ಆದರೆ ಕೆಡುಕನ್ನೆಸಗುವುದನ್ನು ಕಂಡಾಗ ಕೋಪೋದ್ರಿಕ್ತರಾಗುತ್ತಿದ್ದರು. ಅಂತಹ ಕೃತ್ಯವನ್ನೆಸಗುವವನನ್ನು ತಡೆಯುತ್ತಿದ್ದರು ಮತ್ತು ಅವನಿಗೆ ಒಳಿತಿನ ಉಪದೇಶವನ್ನು ನೀಡುತ್ತಿದ್ದರು. ಇಂತಹುದೇ ಶಿಕ್ಷಣವನ್ನು ಅವರು ತಮ್ಮ ಸಹಾಬಿಗಳಿಗೂ ನೀಡಿದ್ದರು. ಅಲ್ಲಾಹನು ಈ ರೀತಿ ಹೇಳಿರುವನು,

﴿ ٱلَّذِينَ إِن مَّكَّنَّٰهُمۡ فِي ٱلۡأَرۡضِ أَقَامُواْ ٱلصَّلَوٰةَ وَءَاتَوُاْ ٱلزَّكَوٰةَ وَأَمَرُواْ بِٱلۡمَعۡرُوفِ وَنَهَوۡاْ عَنِ ٱلۡمُنكَرِۗ وَلِلَّهِ عَٰقِبَةُ ٱلۡأُمُورِ ٤١ ﴾ الحج: ٤١

"(ಇವರು ಎಂತಹವರೆಂದರೆ) ನಾವು ಇವರಿಗೆ ಭೂಮಿಯಲ್ಲಿ ಅಧಿಕಾರ ಪ್ರದಾನ ಮಾಡಿದರೆ ಇವರು ನಮಾಝ್ ಸಂಸ್ಥಾಪಿಸುವರು, ಝಕಾತ್ ಕೊಡುವರು, ಒಳಿತಿನ ಆಜ್ಞೆ ಕೊಡುವರು ಮತ್ತು ಕೆಡುಕಿನಿಂದ ತಡೆಯುವರು ಮತ್ತು ಸಕಲ ವ್ಯವಹಾರಗಳ ಅಂತಿಮ ಪರಿಣಾಮವು ಅಲ್ಲಾಹನ ಕೈಯಲ್ಲಿದೆ." (ಪವಿತ್ರ ಕುರ್ಆನ್: 22: 41)

ಇನ್ನೊಂದೆಡೆ ಹೀಗೆಂದಿದ್ದಾನೆ,

﴿ وَمَا كَانَ ٱلۡمُؤۡمِنُونَ لِيَنفِرُواْ كَآفَّةٗۚ فَلَوۡلَا نَفَرَ مِن كُلِّ فِرۡقَةٖ مِّنۡهُمۡ طَآئِفَةٞ لِّيَتَفَقَّهُواْ فِي ٱلدِّينِ وَلِيُنذِرُواْ قَوۡمَهُمۡ إِذَا رَجَعُوٓاْ إِلَيۡهِمۡ لَعَلَّهُمۡ يَحۡذَرُونَ ١٢٢ ﴾ التوبة: ١٢٢

"ಇದ್ದ ಸತ್ಯವಿಶ್ವಾಸಿಗಳೆಲ್ಲರೂ ಹೊರಟು ಬಿಡುವ ಅಗತ್ಯವೇನೂ ಇರಲಿಲ್ಲ. ಆದರೆ ಅವರ ವಾಸಸ್ಥಾನಗಳ ಪ್ರತಿಯೊಂದು ಭಾಗದಿಂದ ಕೆಲವರು ಹೊರಟು ಬಂದು ಧರ್ಮಪ್ರಜ್ಞೆಯನ್ನು ಹೊಂದಿ ಹಿಂದಿರುಗಿ ಹೋಗಿ ತಮ್ಮ ಪ್ರದೇಶದ ನಿವಾಸಿಗಳನ್ನು (ಅಮುಸ್ಲಿಮರ ರೀತಿ-ನೀತಿಗಳಿಂದ) ದೂರವಿರಲು ಎಚ್ಚರಿಸುವಂತಾಗಲಿಲ್ಲವೇಕೆ?" (ಪವಿತ್ರ ಕುರ್ಆನ್: 9: 122)

ಪ್ರವಾದಿವರ್ಯರು(ಸ) ಹೀಗೆಂದಿರುವರು,

«قُلِ الْحَقَّ وَلَوْ كَانَ مُرًّا» (أحمد)

"ಸತ್ಯವನ್ನೇ ನುಡಿಯಿರಿ, ಅದು ಎಷ್ಟೇ ಕಹಿಯಾದರೂ ಸರಿ." (ಅಹ್ಮದ್)

ಇನ್ನೊಂದು ಹದೀಸಿನಲ್ಲಿ ಅವರು ಹೀಗೆಂದಿರುವುದಾಗಿ ಉಲ್ಲೇಖಗೊಂಡಿದೆ,

«مَنْ رَأَى مِنْكُمْ مُنْكَرًا، فَاسْتَطَاعَ أَنْ يُغَيِّرَهُ بِيَدِهِ، فَلْيُغَيِّرْهُ بِيَدِهِ، فَإِنْ لَمْ يَسْتَطِعْ، فَبِلِسَانِهِ، فَإِنْ لَمْ يَسْتَطِعْ، فَبِقَلْبِهِ، وَذَلِكَ أَضْعَفُ الْإِيمَانِ» (مسلم)

www.uzainfalahi.com

"ನಿಮ್ಮ ಪೈಕಿ ಯಾರಾದರೂ ಕೆಡುಕನ್ನು ಕಂಡರೆ ಅದನ್ನು ಕೈಯಿಂದ ತಡೆಯಬೇಕು. ಅದು ಸಾಧ್ಯವಿಲ್ಲವೆಂದಾದರೆ, ಬಾಯಿಯಿಂದಾದರೂ (ಮಾತಿನಿಂದ) ತಡೆಯಬೇಕು. ಅದೂ ಸಾಧ್ಯವಿಲ್ಲ ಎಂದಾದರೆ ಹೃದಯದಲ್ಲಾದರೂ ಅದು ಕೆಡುಕು ಎಂದು ಭಾವಿಸಬೇಕು. ಇದು ಈಮಾನಿನ ಅತಿ ದುರ್ಬಲ ದರ್ಜೆಯಾಗಿದೆ." (ಮುಸ್ಲಿಮ್)

ಪ್ರವಾದಿವರ್ಯರು(ಸ) ಜನರನ್ನು ಕೆಡುಕಿನ ವಿರುದ್ಧ ಹೋರಾಡಲು ಮತ್ತು ಆ ಹಾದಿಯಲ್ಲಿ ಶೌರ್ಯ ಪ್ರದರ್ಶಿಸಲು ಉಪದೇಶಿಸುತ್ತಾ ಹೇಳಿದರು, "ಅಬ್ದುಲ್ ಮುತ್ತಲಿಬ್‌ರ ಪುತ್ರ ಹಮ್‌ಝಾರವರು(ರ) ಹುತಾತ್ಮರ ಸರದಾರ ಆಗಿದ್ದಾರೆ ಮತ್ತು ಇನ್ನೊಬ್ಬನು ಅಕ್ರಮಿ ಆಡಳಿತಗಾರನ ವಿರುದ್ಧ ಎದ್ದು ನಿಂತು, ಅವನಿಗೆ ಒಳಿತಿನ ಆದೇಶ ನೀಡುತ್ತಾ ಕೆಡುಕಿನಿಂದ ತಡೆಯುತ್ತಾ ಅದೇ ಹಾದಿಯಲ್ಲಿ ಹುತಾತ್ಮನಾಗಿರುವವನಾಗಿದ್ದಾನೆ." (ಅಲ್ ಹಾಕಿಮ್)

- ಸ್ಥೈರ್ಯ ಪ್ರದರ್ಶನವು ಕೇವಲ ಶಕ್ತಿಯ ಬಳಕೆಯ ಸಂದರ್ಭಕ್ಕೆ ಮಾತ್ರ ಸೀಮಿತವಲ್ಲ. ಮಾನವನು ತನ್ನ ವೈಯಕ್ತಿಕ ಕೊರತೆ ಮತ್ತು ದೌರ್ಬಲ್ಯಗಳ ವಿರುದ್ಧ ಎದ್ದು ನಿಲ್ಲುವುದು ಕೂಡ ಸ್ಥೈರ್ಯವೇ ಆಗಿದೆ. ಉದಾಹರಣೆಗೆ: ಓರ್ವ ವಿದ್ಯಾರ್ಥಿಯು ತನ್ನ ತಿಳುವಳಿಕೆಯ ಕೊರತೆಯನ್ನು ಮರೆಮಾಚದೆ, ಬಲ್ಲವರೊಡನೆ ಪ್ರಶ್ನೆಯನ್ನು ಕೇಳಿದರೆ ಮತ್ತು ಹೆಚ್ಚು ವಿದ್ಯೆ ಗಳಿಸಲಿಕ್ಕಾಗಿ ತನ್ನ ಚಿತ್ತಕ್ಕೆ ವಿರುದ್ಧವಾಗಿ ಪರಿಶ್ರಮ ಪಟ್ಟರೆ, ಅದು ಕೂಡ ಸ್ಥೈರ್ಯವೇ ಆಗಿದೆ. ಹಾಗಾಗಿಯೇ ಸಹಾಬಿಗಳು ನಾಚಿಕೆ ಪಡದೆ ತಮಗಿಂತ ಕಿರಿಯರಿಂದಲೂ ವಿದ್ಯೆಯನ್ನು ಗಳಿಸುತ್ತಿದ್ದರು. ಈ ವಿಷಯದಲ್ಲಿ ಸ್ತ್ರೀ–ಪುರುಷರೀರ್ವರೂ ಸಮಾನರಾಗಿದ್ದರು.

- ತನ್ನ ತಪ್ಪುಗಳನ್ನು ಒಪ್ಪುವುದು ಕೂಡ ಒಂದು ರೀತಿಯ ಧೈರ್ಯ–ಸ್ಥೈರ್ಯವಾಗಿದೆ. ಅದಕ್ಕಾಗಿ ಮಾನವನಿಗೆ ತನ್ನೊಡನೆಯೇ ಹೋರಾಡಬೇಕಾಗಿ ಬರುತ್ತದೆ ಮತ್ತು ತನ್ನಲ್ಲಿರುವ ಅಹಮನ್ನು ಅದುಮಿಡಬೇಕಾಗುತ್ತದೆ. ಅದಂತೂ ಸಾಮಾನ್ಯ ಸಂಗತಿಯಲ್ಲ. ಆದ್ದರಿಂದಲೇ ತನ್ನ ಕೋಪವನ್ನು ನಿಯಂತ್ರಿಸುವವನೇ ನಿಜವಾದ ಧೈರ್ಯಶಾಲಿ ಎಂದು ಹೇಳಲಾಗಿದೆ. ತನ್ನ ತಪ್ಪುಗಳನ್ನು ಒಪ್ಪುವುದು ಮತ್ತು ಸತ್ಯವನ್ನು ಅಂಗೀಕರಿಸುವುದು ಒಂದು ದೊಡ್ಡ ಸಾಹಸವೇ ಆಗಿದೆ. ಪ್ರವಾದಿಗಳ ಚರಿತ್ರೆಯಲ್ಲಿ ಇದಕ್ಕೆ ಉದಾಹರಣೆಗಳು ಕಾಣಸಿಗುತ್ತವೆ. ಪ್ರವಾದಿ ಆದಮ್‌ರವರು(ಅ) ತಮ್ಮ ತಪ್ಪನ್ನು ಒಪ್ಪಿ ಅಲ್ಲಾಹನಲ್ಲಿ ಕ್ಷಮೆಗಾಗಿ ಪ್ರಾರ್ಥಿಸಿದರು. ಅದೇ ರೀತಿ ಪ್ರವಾದಿ ಯೂನುಸ್‌ರವರು(ಅ) ಮೀನಿನ ಹೊಟ್ಟೆಯೊಳಗಿನಿಂದ ಅಲ್ಲಾಹನಲ್ಲಿ ತಮ್ಮ ತಪ್ಪುಗಳಿಗೆ ಕ್ಷಮೆಯನ್ನು ಬೇಡುತ್ತಾ ಹೀಗೆಂದಿದ್ದರು,

﴿ لَّآ إِلَٰهَ إِلَّآ أَنتَ سُبۡحَٰنَكَ إِنِّي كُنتُ مِنَ ٱلظَّٰلِمِينَ ٨٧ ﴾ الأنبياء: ٨٧

"ನಿನ್ನ ಹೊರತು ಅನ್ಯ ದೇವನಿಲ್ಲ. ನೀನು ಪರಮ ಪಾವನನು. ನಿಶ್ಚಯವಾಗಿಯೂ ನಾನು ಅಪರಾಧವೆಸಗಿದವರಲ್ಲಿ ಸೇರಿರುವೆನು." (ಪವಿತ್ರ ಕುರ್‌ಆನ್: 21: 87)

ಓರ್ವ ಮುಸ್ಲಿಮನು ಸ್ವಭಾವತಃ ಶೂರನಾಗಿರುತ್ತಾನೆ. ಆದ್ದರಿಂದಲೇ ಅವನಿಂದ ಏನಾದರೂ ಪಾಪ ಕಾರ್ಯವು ಸಂಭವಿಸಿ ಬಿಟ್ಟರೆ, ತನ್ನ ತಪ್ಪಿನ ಅರಿವಾದ ಕೂಡಲೇ ಪಶ್ಚಾತ್ತಾಪ ಪಟ್ಟು ಅಲ್ಲಾಹನಲ್ಲಿ ಕ್ಷಮೆ ಯಾಚಿಸುತ್ತಾನೆ.

- ಯುದ್ಧರಂಗದಲ್ಲಿ ಸತ್ಯದ ಸ್ಥಾಪನೆ ಮತ್ತು ಮಿಥ್ಯದ ನಿರ್ಮೂಲನೆಗಾಗಿ ಜೀವದ ಹಂಗು ತೊರೆದು ಹೋರಾಡುವುದು ಧೀರ–ಶೂರರ ಗುಣವಾಗಿದೆ. ಅಲ್ಲಾಹನು ಮುಸ್ಲಿಮರಿಗೆ ಇದೇ ಆದೇಶವನ್ನು ನೀಡಿರುವನು.

﴿ وَأَعِدُّوا۟ لَهُم مَّا ٱسْتَطَعْتُم مِّن قُوَّةٍ وَمِن رِّبَاطِ ٱلْخَيْلِ تُرْهِبُونَ بِهِۦ عَدُوَّ ٱللَّهِ وَعَدُوَّكُمْ وَءَاخَرِينَ مِن
دُونِهِمْ لَا تَعْلَمُونَهُمُ ٱللَّهُ يَعْلَمُهُمْ ۚ وَمَا تُنفِقُوا۟ مِن شَىْءٍ فِى سَبِيلِ ٱللَّهِ يُوَفَّ إِلَيْكُمْ وَأَنتُمْ لَا تُظْلَمُونَ ﴿٦٠﴾ ﴾
الأنفال: ٦٠

“ನೀವು ನಿಮ್ಮಿಂದ ಸಾಧ್ಯವಾದಷ್ಟು ಹೆಚ್ಚು ಶಕ್ತಿಯನ್ನು ಹಾಗೂ ಸಾಕಿ ಸಿದ್ಧಗೊಳಿಸಿದ ಕುದುರೆಗಳನ್ನು ಅವರೊಡನೆ ಹೋರಾಟ ನಡೆಸಲಿಕ್ಕಾಗಿ ಅಣಿಗೊಳಿಸಿಕೊಳ್ಳಿರಿ. ಇದರ ಮೂಲಕ ಅಲ್ಲಾಹನ ಶತ್ರು, ನಿಮ್ಮ ಶತ್ರು ಮತ್ತು ನಿಮಗೆ ಅರಿವಿಲ್ಲದ ಹಾಗೂ ಅಲ್ಲಾಹನಿಗೆ ಅರಿವಿರುವ ಇತರ ಶತ್ರುಗಳನ್ನು ಭೀತಿಗೊಳಿಸಲಿಕ್ಕಾಗಿ.” (ಪವಿತ್ರ ಕುರ್‌ಆನ್: 8: 60)
ಇನ್ನೊಂದೆಡೆ ಹೀಗೆಂದಿರುವನು,

﴿ إِنَّ ٱللَّهَ يُحِبُّ ٱلَّذِينَ يُقَـٰتِلُونَ فِى سَبِيلِهِۦ صَفًّا كَأَنَّهُم بُنْيَـٰنٌ مَّرْصُوصٌ ﴿٤﴾ ﴾ الصف: ٤

“ಅಲ್ಲಾಹನಿಗಂತು, ಅವನ ಮಾರ್ಗದಲ್ಲಿ ಸೀಸದ ಎರಕ ಹೊಯ್ದ ಉಕ್ಕಿನ ಗೋಡೆಯೋ ಎಂಬಂತೆ ಪಂಕ್ತಿಬದ್ಧರಾಗಿ ಹೋರಾಡುವವರೇ ಪ್ರಿಯರು.” (ಪವಿತ್ರ ಕುರ್‌ಆನ್: 61: 4)
ಮತ್ತೊಂದೆಡೆ ಹೀಗೆಂದಿರುವನು,

﴿ يَـٰٓأَيُّهَا ٱلَّذِينَ ءَامَنُوٓا۟ إِذَا لَقِيتُمْ فِئَةً فَٱثْبُتُوا۟ وَٱذْكُرُوا۟ ٱللَّهَ كَثِيرًا لَّعَلَّكُمْ تُفْلِحُونَ ﴿٤٥﴾ ﴾ الأنفال:
٤٥

“ಓ ಸತ್ಯವಿಶ್ವಾಸಿಗಳೇ, ಯಾವುದಾದರೊಂದು ತಂಡದೊಂದಿಗೆ ನಿಮ್ಮ ಹೋರಾಟ ನಡೆದರೆ ನೀವು ಸುಸ್ಥಿರರಾಗಿರಿ ಮತ್ತು ಅಲ್ಲಾಹನನ್ನು ಅತಿ ಹೆಚ್ಚಾಗಿ ಸ್ಮರಿಸಿರಿ. ನಿಮಗೆ ವಿಜಯ ಪ್ರಾಪ್ತಿಯಾದೀತೆಂದು ನಿರೀಕ್ಷಿಸಬಹುದು.” (ಪವಿತ್ರ ಕುರ್‌ಆನ್: 8: 45)
ಮಗದೊಂದೆಡೆ ಹೀಗೆ ಆದೇಶಿಸಿರುವನು,

﴿ يَـٰٓأَيُّهَا ٱلَّذِينَ ءَامَنُوٓا۟ إِذَا لَقِيتُمُ ٱلَّذِينَ كَفَرُوا۟ زَحْفًا فَلَا تُوَلُّوهُمُ ٱلْأَدْبَارَ ﴿١٥﴾ ﴾ الأنفال: ١٥

“ಓ ಸತ್ಯವಿಶ್ವಾಸಿಗಳೇ, ನೀವು ಒಂದು ಸೇನೆಯ ರೂಪದಲ್ಲಿ ಸತ್ಯನಿಷೇಧಿಗಳನ್ನು ಎದುರ್ಗೊಂಡಾಗ ಯುದ್ಧದಲ್ಲಿ ಹಿಮ್ಮೆಟ್ಟಬೇಡಿರಿ.” (ಪವಿತ್ರ ಕುರ್‌ಆನ್: 8: 15)

ಓರ್ವ ಮುಸ್ಲಿಮನು ಮರಣಕ್ಕೆ ಭಯಪಡುವುದಿಲ್ಲ. ಬದಲಾಗಿ, ಅವನ ಧೈರ್ಯ-ಸಾಹಸವು ಅಲ್ಲಾಹನ ಮಾರ್ಗದಲ್ಲಿ ಹುತಾತ್ಮತೆಯನ್ನು ಬಯಸುತ್ತಿರುತ್ತದೆ.

ಪ್ರವಾದಿವರ್ಯರು(ಸ) ಜನರಿಗೆ ಶಕ್ತಿ ಗಳಿಸಲು ಪ್ರೇರೇಪಿಸುತ್ತಿದ್ದರು. ಒಂದು ಸಂದರ್ಭದಲ್ಲಿ ಅವರು ಹೀಗೆಂದಿರುವರು,

«الْمُؤْمِنُ الْقَوِيُّ، خَيْرٌ وَأَحَبُّ إِلَى اللهِ مِنَ الْمُؤْمِنِ الضَّعِيفِ، وَفِي كُلٍّ خَيْرٌ احْرِصْ عَلَى مَا يَنْفَعُكَ، وَاسْتَعِنْ بِاللهِ وَلَا تَعْجَزْ » (مسلم)

“ಅಲ್ಲಾಹನ ದೃಷ್ಟಿಯಲ್ಲಿ ದುರ್ಬಲ ವಿಶ್ವಾಸಿಗಿಂತ ಬಲಶಾಲಿ ಮುಸ್ಲಿಮನು ಹೆಚ್ಚು ಪ್ರಿಯನಾಗಿದ್ದಾನೆ. ವಸ್ತುತಃ ಪ್ರತಿಯೊಂದರಲ್ಲೂ ಒಳಿತಿದೆ. ನಿಮಗೆ ಪ್ರಯೋಜನಕಾರಿಯಾಗಿರುವ ವಸ್ತುವನ್ನು ಬಯಸಿರಿ. ಅಲ್ಲಾಹನ ಸಹಾಯವನ್ನು ಯಾಚಿಸಿರಿ ಮತ್ತು ವಿವಶರಾಗಿ ಕೈ ಕಟ್ಟಿ ಕುಳಿತುಕೊಂಡಿರಬೇಡಿರಿ.” (ಮುಸ್ಲಿಮ್)

ಸತ್ಯವಿಶ್ವಾಸ ಮತ್ತು ಶೌರ್ಯವು ಪರಸ್ಪರ ಅನಿವಾರ್ಯವಾಗಿವೆ. ಅದರ ಹೊರತು ಸತ್ಯವಿಶ್ವಾಸಿಯು ಧರ್ಮದ ಬೇಡಿಕೆಗಳನ್ನು ಸಂಪೂರ್ಣವಾಗಿ ಈಡೇರಿಸಲಾರನು.

* * * * *

www.uzairtalahi.com